# ಬೆಂಬಲ ಬೆಲೆ ನೀಡಿ ರೈತರಿಗೆ ನೆರವು

**ವಿಶ್ವವಾಣಿ ಸುದ್ದಿಮನೆ** ಧಾರವಾಡ

ಕೃಷಿಗೆ ಹೆಚ್ಚಿನ ಆದ್ಯತೆ ನೀಡಿರುವ ಕರ್ನಾಟಕ ಸರಕಾರ ರೈತರು ಬೆಳೆದ ಕೃಷಿ ಉತ್ಪನ್ನಗಳಿಗೆ ಬೆಂಬಲ ಬೆಲೆ ಯೋಜನೆಯಡಿ ರೈತರ ಉತ್ಪನ್ನ ಖರೀದಿಸಿ ನೆರವಾಗಿದೆ ಎಂದು ಕರ್ನಾಟಕ ಕೃಷಿ ಬೆಲೆ ಆಯೋಗದ ಅಧ್ಯಕ್ಷ ಡಾ. ಟಿ.ಎನ್. ಪ್ರಕಾಶ ಕಮ್ಮರಡಿ ಹೇಳಿದರು.

ಶನಿವಾರ ನಗರದ ಕೃಷಿ ವಿಶ್ವವಿದ್ಯಾಲಯದ ಸಂಶೋಧನ ನಿರ್ದೇಶನಾಲಯದ ಸಭಾಂಗಣದಲ್ಲಿ ಕರ್ನಾಟಕದ ಕೃಷಿ ಮತ್ತು ತೋಟಗಾರಿಕಾ ಬೆಳೆಗಳ ವೆಚ್ಚ, ಮಾರುಕಟ್ಟೆ ಮತ್ತು ಬೆಲೆಗಳ ವಸ್ತುಸ್ಥಿತಿ ವರದಿ ಆಧಾರಿತ ಕರಪತ್ರಗಳನ್ನು ಬಿಡುಗಡೆ ಮಾಡಿ ಮಾತನಾಡಿದರು.

ರಾಜ್ಯ ಸರಕಾರವು ಕೃಷಿ ಮತ್ತು ರೈತರ ಹಿತರಕ್ಷಣೆಗೆ ಬದ್ಧವಾಗಿದ್ದು, ಕಳೆದ ನಾಲ್ಕು ವರ್ಷಗಳಲ್ಲಿ ಕರ್ನಾಟಕ ರಾಜ್ಯಾದ್ಯಂತ ರೈತರು ಬೆಳೆಯುವ ಆಹಾರ ಬೆಳೆ, ಏಕದಳ ಮತ್ತು ದ್ವಿದಳ ಉತ್ಪನ್ನಗಳ ಸುಮಾರು 14 ತರಹದ ಆಹಾರ ಉತ್ಪನ್ನಗಳನ್ನು 205.08 ಲಕ್ಷ ಕ್ವಿಂಟಲ್‌ಗಳಲ್ಲಿ ರೈತರಿಂದ ನೇರವಾಗಿ ಖರೀದಿಸಲಾಗಿದೆ. ಖರೀದಿಸಿದ ಒಟ್ಟು ಮೌಲ್ಯ 4793 ಕೋಟಿ ರು.ಗಳಾಗಿದ್ದು, ರಾಜ್ಯದ 45,4025 ಜನ ರೈತರು ಇದರ ಪ್ರಯೋಜನ ಪಡೆದಿದ್ದಾರೆ. ಫಲಾನುಭವಿ ರೈತರ ಪೈಕಿ ಪ್ರತಿ ರೈತನಿಗೆ ಸರಿ ಸುಮಾರು 1,05,559 ರು. ಲಾಭ ತಲುಪಿದೆ ಎಂದು ಡಾ. ಪ್ರಕಾಶ ಕಮ್ಮರಡಿ ಹೇಳಿದರು.

ಬೆಂಬಲ ಬೆಲೆಯಲ್ಲಿ ಮೆಕ್ಕೆಜೋಳ ಖರೀದಿಸಲು ಬಹಳಷ್ಟು ರೈತರ ಬೇಡಿಕೆಯಿದೆ. ಅದರಂತೆ ಪ್ರತಿ ಕ್ವಿಂಟಾಲಗೆ 1425 ರು.ಗಳಂತೆ ರೈತರಿಂದ ಖರೀದಿಸಲು ನಿರ್ಧರಿಸಿ, ಈ ಕುರಿತು ಕೇಂದ್ರ ಸರಕಾರಕ್ಕೆ ಪ್ರಸ್ತಾವನೆ ಸಲ್ಲಿಸಲಾಗಿತ್ತು. ಆದರೆ ಕೇಂದ್ರ ಸರಕಾರ ಸಂಬಂಧಿತ ಇಲಾಖೆ ಮೆಕ್ಕೆಜೋಳ ಖರೀದಿಗೆ ಬೆಂಬಲ ಬೆಲೆ ನೀಡಲು ನಿರಾಕರಿಸಿದೆ ಎಂದು ತಿಳಿಸಿದರು.



ಕೃಷಿ ವಿವಿ ಸಂಶೋಧನ ನಿರ್ದೇಶನಾಲಯದ ಸಭಾಂಗಣದಲ್ಲಿ ಕರ್ನಾಟಕದ ಕೃಷಿ ಮತ್ತು ತೋಟಗಾರಿಕಾ ಬೆಳೆಗಳ ವೆಚ್ಚ, ಮಾರುಕಟ್ಟೆ ಮತ್ತು ಬೆಲೆಗಳ ವಸ್ತುಸ್ಥಿತಿ ವರದಿ ಆಧಾರಿತ ಕರಪತ್ರಗಳನ್ನು ಕೃಷಿ ಬೆಲೆ ಆಯೋಗದ ಅಧ್ಯಕ್ಷ ಪ್ರಕಾಶ ಕಮ್ಮರಡಿ ಬಿಡುಗಡೆ ಮಾಡಿದರು.

ರಾಜ್ಯದ ಸುಮಾರು 26 ಬೆಳೆಗಳ ಬೆಲೆಯನ್ನು ಮುಂದಿನ ಆರು ತಿಂಗಳಿಗೆ ಅಂದಾಜಿಸಿ ಬೆಂಬಲ ಬೆಲೆ ನಿಗದಿಪಡಿಸಲು ರಾಜ್ಯ ಸರಕಾರಕ್ಕೆ ಆಯೋಗದಿಂದ ಪ್ರಸ್ತಾವನೆ ಸಲ್ಲಿಸಲಾಗಿದೆ. ಇದು ರೈತರಿಗೆ ಸಹಕಾರಿಯಾಗಲಿದೆ. ಕೇಂದ್ರ ಸರಕಾರವು ಕೃಷಿಗೆ ಪೂರಕವಾಗಿ ರೈತರಿಗೆ ಕೃಷಿ ಉತ್ಪನ್ನಗಳ ಮಾರಾಟಕ್ಕೆ ಅನುಕೂಲವಾಗುವಂತೆ ಮಾರ್ಕೆಟಿಂಗ್ ಅಶುರೆನ್ಸ್ ಸ್ಕೀಮ್ ಎಂಬ ನೂತನ ಕಾಯ್ದೆಯನ್ನು ಜಾರಿಗೊಳಿಸಲು ನಿರ್ಧರಿಸಿದೆ. ಇದರಿಂದಾಗಿ ರೈತರ ಉತ್ಪನ್ನಗಳಿಗೆ ಉತ್ತಮ ಬೆಲೆ ಸಿಗುತ್ತದೆ ಮತ್ತು ರೈತರು ಈ ಸಮಸ್ಯೆಗಳಿಂದ ಮುಕ್ತರಾಗಬಹುದು ಎಂದು ಹೇಳಿದರು. ಕೃಷಿ ಇಲಾಖೆ ಜಂಟಿ ನಿರ್ದೇಶಕ ಟಿ.ಎಸ್. ರುದ್ರೇಶಪ್ಪ ಮಾತನಾಡಿದರು.

ಸಭೆಯಲ್ಲಿ ಕಡಿಮೆ ಖರ್ಚಿನ ಮತ್ತು ಖರ್ಚಿಲ್ಲದ ತಂತ್ರಜ್ಞಾನಗಳ ದಾಖಲಿಕರಣ ಯೋಜನೆಯ ಪ್ರಗತಿ, ಉತ್ಪಾದನೆ ವೆಚ್ಚ ಮತ್ತು ಮಾರುಕಟ್ಟೆ ಮಾಹಿತಿ ಘಟಕದ ಪ್ರಗತಿ, ಧಾರವಾಡ ಜಿಲ್ಲೆಯ ಪ್ರಮುಖ ಕೃಷಿ ಮತ್ತು ತೋಟಗಾರಿಕೆ ಬೆಳೆಗಳ ಉತ್ಪಾದನೆ ವೆಚ್ಚ, ಮಾರುಕಟ್ಟೆ ಬೆಲೆ, ಕನಿಷ್ಠ ಬೆಂಬಲ ಬೆಲೆ ಕುರಿತು ವಿಜ್ಞಾನಿಗಳು, ಅಧಿಕಾರಿಗಳು ಮತ್ತು ರೈತರೊಂದಿಗೆ ಸಮಾಲೋಚನೆ ನಡೆಸಲಾಯಿತು. ಇದೇ ಸಂದರ್ಭದಲ್ಲಿ ವಿವಿಧ ಬೆಳೆಗಳ ವಸ್ತುಸ್ಥಿತಿ ವರದಿ ಕುರಿತು ಕರಪತ್ರಗಳನ್ನು ಆಯೋಗದ ಅಧ್ಯಕ್ಷ ಡಾ.ಪ್ರಕಾಶ ಕಮ್ಮರಡಿ ಬಿಡುಗಡೆ ಮಾಡಿದರು.

ಕೃಷಿ ವಿಶ್ವವಿದ್ಯಾಲಯದ ಅಧಿಕಾರಿಗಳಾದ ಡಾ.ಬಿ.ಎಸ್.ಜನಗೌಡರ, ಡಾ. ವಿ.ಐ. ಬೆಣಗಿ, ಡಾ. ಎಚ್.ಬಸಪ್ಪ, ಡಾ. ವಿಲಾಸ ಕುಲಕರ್ಣಿ, ಡಾ. ಆರ್.ಎಚ್.ಪಾಟೀಲ, ಡಾ. ಕುಸುಮಾ ಡಿ.ಕೆ, ಡಾ. ಭೀಮನಗೌಡ ಪಾಟೀಲ ಸೇರಿದಂತೆ ಕೃಷಿ ಇಲಾಖೆಯ ಉಪ ನಿರ್ದೇಶಕ ಉಮೇಶ ಸಭೆಯಲ್ಲಿ ಭಾಗವಹಿಸಿದ್ದರು.

# 'ಬೆಂಬಲ ಬೆಲೆ ವರ್ತಕರ ಪಾಲಾಗದಿರಲಿ'

ಧಾರವಾಡ: ಬೆಳೆಗಳಿಗೆ ಬೆಂಬಲ ಬೆಲೆ ನೀಡಿದಾಗ, ಖಾಸಗಿ ವ್ಯಾಪಾರಿಗಳಿಂದ ರೈತರ ಹಗಲು ದರೋಡೆ ನಡೆಯುತ್ತಿದ್ದು ಇದನ್ನು ತಪ್ಪಿಸಬೇಕಿದೆ ಎಂದು ಕೃಷಿ ಬೆಲೆ ಆಯೋಗದ ಅಧ್ಯಕ್ಷ ಡಾ.ಪ್ರಕಾಶ ಕಮ್ಮರಡಿ ಅಭಿಪ್ರಾಯಪಟ್ಟರು.



ಕೃಷಿ ಇಲಾಖೆ ಅಧಿಕಾರಿಗಳ ಸಮಾಲೋಚನಾ ಸಭೆಯಲ್ಲಿ ಕೃಷಿ ಬೆಲೆ ಆಯೋಗದ ಅಧ್ಯಕ್ಷ ಡಾ.ಪ್ರಕಾಶ ಕಮ್ಮರಡಿ ಮಾತನಾಡಿದರು

ಕೃಷಿ ವಿಶ್ವವಿದ್ಯಾಲಯ ಸಭಾಂಗಣದಲ್ಲಿ ಶನಿವಾರ ನಡೆದ ಕೃಷಿ ಇಲಾಖೆ ಅಧಿಕಾರಗಳ ಸಮಾಲೋಚನಾ ಸಭೆಯಲ್ಲಿ ಮಾತನಾಡಿದ ಅವರು, 'ಸರ್ಕಾರದ ಖರೀದಿ ಕೇಂದ್ರಗಳಲ್ಲಿ ಬೆಂಬಲ ಬೆಲೆ ಹೆಚ್ಚು ಇರುವುದರಿಂದ, ವರ್ತಕರು ರೈತರಿಂದ ಕಡಿಮೆ ಬೆಲೆಗೆ ಖರೀದಿಸಿ ಸರ್ಕಾರಿ ಕೇಂದ್ರಗಳಿಗೆ ಹೆಚ್ಚಿನ ಬೆಲೆಗೆ ಮಾರಾಟ ಮಾಡುತ್ತಿದ್ದಾರೆ. ಕಳೆದ ವರ್ಷ ನಾವು ₹5,500 ಕೊಟ್ಟು ತೊಗರಿ ಖರೀದಿಸಿದರೆ, ಖಾಸಗಿಯವರು ₹3 ಸಾವಿರಕ್ಕೆ ಖರೀದಿಸಿ, ಸರ್ಕಾರಕ್ಕೆ ಮಾರಿದ್ದಾರೆ. ಮುಂದೆ ಇಂಥದಕ್ಕೆ ಆಸ್ಪದ ನೀಡಬಾರದು' ಎಂದರು. ರಾಜ್ಯ ಸರ್ಕಾರವು ಒಟ್ಟು 24 ಬೆಳೆಗಳಿಗೆ ಬೆಂಬಲ ಬೆಲೆ ನಿಗದಿಪಡಿಸಿದ್ದು, ಅವುಗಳಲ್ಲಿ 10ಕ್ಕಿಂತಲೂ ಹೆಚ್ಚು ಉತ್ತರ ಕರ್ನಾಟಕ ಭಾಗದ ಬೆಳೆಗಳು ಎಂದರು.ಮಾರುಕಟ್ಟೆಯನ್ನು ರೈತರ ಬಳಿಗೇ ತರಲು ಸರ್ಕಾರದಿಂದ ಕ್ರಮ ಕೈಗೊಳ್ಳಲಾಗುತ್ತಿದ್ದು, ಯೋಜನೆಗಳ ಕುರಿತು ರೈತರಿಗೆ ಅಗತ್ಯ ಮಾಹಿತಿ ನೀಡಬೇಕು ಎಂದು ಅಧಿಕಾರಿಗಳಿಗೆ ಸೂಚಿಸಿದರು.

ಬೆಳೆಗಳ ಬೆಲೆ ಖಾತ್ರಿಗೊಳಿಸುವ ನಿಟ್ಟಿನಲ್ಲಿ ಕಾನೂನಿನ ರಕ್ಷಣೆ, ಸಮರ್ಪಕ ಖರೀದಿ, ಶೇಖರಣೆ, ಅಡಮಾನ ಸಾಲ ವ್ಯವಸ್ಥೆ ಬಲಪಡಿಸುವುದರ ಜತೆಗೆ, ಬೆಲೆ ವ್ಯತ್ಯಾಸ ಪರಿಹಾರ ನೀಡುವ ಕುರಿತ ಮಹತ್ವದ ಶಿಫಾರಸುಗಳನ್ನು ಕೃಷಿ ಬೆಲೆ ಆಯೋಗ ಸದ್ಯದಲ್ಲಿಯೇ ಸರ್ಕಾರಕ್ಕೆ ಸಲ್ಲಿಸಲಿದೆ ಎಂದರು.

ಕಳೆದ ನಾಲ್ಕು ವರ್ಷಗಳಲ್ಲಿ ರಾಜ್ಯದಾದ್ಯಂತ ಆಹಾರ ಬೆಳೆ, ಏಕದಳ ಮತ್ತು ದ್ವಿದಳ ಧಾನ್ಯ ಸೇರಿದಂತೆ 14 ಆಹಾರ ಉತ್ಪನ್ನಗಳಿಗೆ ಸಂಬಂಧಿಸಿದಂತೆ ₹4,793 ಕೋಟಿ ಮೌಲ್ಯದ 205 ಲಕ್ಷ ಕ್ವಿಂಟಲ್ ಬೆಳೆಯನ್ನು ರೈತರಿಂದ ನೇರವಾಗಿ ಖರೀದಿಸಲಾಗಿದೆ. ನಾಲ್ಕು ಲಕ್ಷ ರೈತರು ಇದರ ಪ್ರಯೋಜನ ಪಡೆದಿದ್ದಾರೆ ಎಂದು ತಿಳಿಸಿದರು.

ರಾಜ್ಯ ಕೃಷಿ ಬೆಲೆ ಆಯೋಗ, ಉತ್ಪಾದನಾ ವೆಚ್ಚ ಹಾಗೂ ಮಾರುಕಟ್ಟೆ ಮಾಹಿತಿ ಘಟಕ · ಹಾಗೂ ಕೃಷಿ ವಿಶ್ವವಿದ್ಯಾಲಯದ ವತಿಯಿಂದ ರಚಿಸಿದ ರಾಜ್ಯದ ಪ್ರಮುಖ ಬೆಳೆಗಳ ವಸ್ತುಸ್ಥಿತಿ ತಿಳಿಸುವ ಕಿರುಹೊತ್ತಿಗೆಗಳನ್ನು ಬಿಡುಗಡೆ ಮಾಡಲಾಯಿತು.

ಕೃಷಿ ಇಲಾಖೆ ಜಂಟಿ ನಿರ್ದೇಶಕ ಟಿ.ಎಸ್. ರುದ್ರಪ್ಪ, ಡಾ.ಆರ್.ಎಚ್. ಪಾಟೀಲ, ಡಾ.ಬಿ.ಎಸ್. ಜನಗೌಡರ, ಡಾ.ವಿ.ಐ. ಬೆಣಗಿ, ಡಾ.ಎಚ್.ಬಸಪ್ಪ, ಡಾ.ವಿಲಾಸ ಕುಲಕರ್ಣಿ ಹಾಗೂ ಕೃಷಿ ಇಲಾಖೆ ಅಧಿಕಾರಿಗಳು ಹಾಗೂ ಕೃಷಿ ವಿಶ್ವವಿದ್ಯಾಲಯದ ಅಧಿಕಾರಿಗಳು ಇದ್ದರು.

# ಬೆಲೆ ವ್ಯತ್ಯಾಸ ಪರಿಹಾರ: ಶೀಘ್ರ ಸರ್ಕಾರಕ್ಕೆ ಶಿಫಾರಸು

**ಧಾರವಾಡ:** ರಾಜ್ಯ ಸರಕಾರ ಕೃಷಿ ಉತ್ಪನ್ನಗಳಿಗೆ ಬೆಂಬಲ ಬೆಲೆ ಯೋಜನೆಯಡಿ ಉತ್ಪನ್ನ ಖರೀದಿಸಿ ರೈತರಿಗೆ ನೆರವಾಗಿದೆ ಎಂದು ರಾಜ್ಯ ಕೃಷಿ ಬೆಲೆ ಆಯೋಗದ ಅಧ್ಯಕ್ಷ ಡಾ. ಪ್ರಕಾಶ ಕಮ್ಮರಡಿ ಹೇಳಿದರು.

ನಗರದ ಕೃಷಿ ವಿಶ್ವವಿಶ್ವವಿದ್ಯಾಲಯದಲ್ಲಿ ಕೃಷಿ ಅಧಿಕಾರಿಗಳ ಸಮಾಲೋಚನಾ ಸಭೆಯ ಅಧ್ಯಕ್ಷತೆ ವಹಿಸಿ ಮಾತನಾಡಿ, ರೈತರ ಬೆಳೆಗಳನ್ನು ಮಾರುಕಟ್ಟೆಗೆ ತರುವಲ್ಲಿ ತಗಲುವ ಸಾಗಾಣಿಕೆ ಹಾಗೂ ಅಗತ್ಯ ಗೋಣಿಚೀಲಗಳ ವೆಚ್ಚವನ್ನು ಸರಕಾರ ಭರಿಸುವಂತೆ ಶಿಫಾರಸ್ಸು ಮಾಡಲಾಗುತ್ತಿದೆ. ಬೆಳೆಗಳ ಬೆಲೆ ಖಾತ್ರಿಗೊಳಿಸುವ ನಿಟ್ಟಿನಲ್ಲಿ ಕಾನೂನಿನ ರಕ್ಷಣೆ, ಸಮರ್ಪಕ ಖರೀದಿ, ಶೇಖರಣೆ, ಅಡಮಾನ ಸಾಲ ವ್ಯವಸ್ಥೆ ಬಲಪಡಿಸುವ ಜೊತೆಗೆ ಬೆಲೆ ವ್ಯತ್ಯಾಸ ಪರಿಹಾರ ನೀಡುವಂತೆ ಆಯೋಗವು ಸದ್ಯದಲ್ಲಿಯೇ ಸರಕಾರಕ್ಕೆ ಶಿಫಾರಸು ಮಾಡಲಾಗುವುದು ಎಂದರು.

ಕಳೆದ ನಾಲ್ಕು ವರ್ಷಗಳಲ್ಲಿ ಕರ್ನಾಟಕ ರಾಜ್ಯದಾದ್ಯಂತ ಆಹಾರ ಬೆಳೆ, ಏಕದಳ ಮತ್ತು ದ್ವಿದಳ ಉತ್ಪನ್ನಗಳ ಸುಮಾರು 14 ತರಹದ ಆಹಾರ ಉತ್ಪನ್ನಗಳನ್ನು 205.08 ಲಕ್ಷ ಕ್ವಿಂಟಲ್‌ಗಳಲ್ಲಿ ರೈತರಿಂದ ನೇರವಾಗಿ ಖರೀದಿಸಲಾಗಿದೆ. ಖರೀದಿಸಿದ ಒಟ್ಟು ಮೌಲ್ಯ 4793 ಕೋಟಿಗಳಾಗಿದ್ದು, ರಾಜ್ಯದ 454025 ಜನ ರೈತರು ಇದರ ಪ್ರಯೋಜನ ಪಡೆದಿದ್ದಾರೆ. ಫಲಾನುಭವಿ ರೈತರ ಪೈಕಿ ಪ್ರತಿ ರೈತನಿಗೆ ಸರಿ ಸುಮಾರು 105559 ರೂ. ಲಾಭ ತಲುಪಿದೆ ಎಂದರು.

ಪಡಿತರದಲ್ಲಿ ವಿತರಿಸುವ ಸಿರಿ ಧಾನ್ಯಗಳನ್ನು ಮಾತ್ರ ಬೆಂಬಲ ಬೆಲೆ ನೀಡಿ ಖರೀದಿಸಬೇಕು ಎಂದು ಕೇಂದ್ರ ಸರಕಾರದ ಆಹಾರ ಮತ್ತು ನಾಗರಿಕ ಸರಬರಾಜು ಇಲಾಖೆ ಸೂಚನೆ ನೀಡಿದೆ. ಗೋವಿನಜೋಳಕ್ಕೆ ಬೆಂಬಲ ಬೆಲೆ ನಿಗಪಡಿಸಿ ಖರೀದಿಸುವುದನ್ನು ನಿಲ್ಲಿಸಲಾಗಿದೆ. ಕೇಂದ್ರ ಸರಕಾರ ಈ ರೀತಿ ಸೂಚನೆ ನೀಡಿರುವುದು ಮೂರ್ಖತನದ ನಿರ್ಣಯವಾಗಿದೆ ಎಂದು ಬೇಸರ ವ್ಯಕ್ತಪಡಿಸಿದರು.

ಇತ್ತೀಚೆಗೆ ಕರ್ನಾಟಕ ಕೃಷಿ ಮತ್ತು ತೋಟಗಾರಿಕಾ ಬೆಳೆಗಳ ವೆಚ್ಚ, ಮಾರುಕಟ್ಟೆ ಮತ್ತು ಬೆಲೆಗಳ ವಸ್ತುಸ್ಥಿತಿ ವರದಿ ಸಲ್ಲಿಸುತ್ತಿದ್ದು ಅದರಲ್ಲಿ ಪ್ರಮುಖವಾಗಿ ಕಡಿಮೆ ವೆಚ್ಚದಲ್ಲಿ ಹೆಚ್ಚು ಉತ್ಪಾದನೆ ಮಾಡುವಲ್ಲಿ ಕೃಷಿಯಲ್ಲಿ ಆಯಾ ಬೆಳೆಗಳಿಗೆ ಅನುಗುಣವಾಗಿ ಯಂತ್ರೋಪಕರಣಗಳನ್ನು ಬಳಸುವ, ಯಾಂತ್ರೀಕರಣದ ಮೂಲಕ ಕೃಷಿ ಉತ್ಪಾದನಾ ವೆಚ್ಚ ಕಡಿತಗೊಳಿಸುವ ಮಾರ್ಗಸೂಚಿಗಳನ್ನು ಕಂಡುಕೊಳ್ಳಲಾಗಿದೆ ಎಂದರು.

ರಾಜ್ಯ ಕೃಷಿ ಬೆಲೆ ಆಯೋಗ, ಉತ್ಪಾದನ ವೆಚ್ಚ ಹಾಗೂ ಮಾರುಕಟ್ಟೆ ಮಾಹಿತಿ ಘಟಕ ಹಾಗೂ ಕೃಷಿ ವಿಶ್ವವಿದ್ಯಾಲಯದ ವತಿಯಿಂದ ರಚಿಸಿದ್ದ ರಾಜ್ಯದ ಪ್ರಮುಖ ಬೆಳೆಗಳ ವಸ್ತು ಸ್ಥಿತಿ ತಿಳಿಸುವ ಕಿರುಹೊತ್ತಿಗೆಯನ್ನು ಬಿಡುಗಡೆ ಗೊಳಿಸಿದರು.

ಸಂಶೋಧನಾ ನಿರ್ದೇಶಕ ಆರ್.ಐ. ಬೆಣಗಿ, ವಿಸ್ತರಣಾ ನಿರ್ದೇಶಕ ಡಾ. ಎಚ್. ಬಸಪ್ಪ, ಶಿಕ್ಷಣ ನಿರ್ದೇಶಕ ಡಾ. ಬಿ.ಎಸ್. ಜನಗೌಡರ, ಕೃಷಿ ಇಲಾಖೆ ಜಂಟಿ ನಿರ್ದೇಶಕ ಟಿ.ಎಸ್. ರುದ್ರಪ್ಪ ಇದ್ದರು.



ಧಾರವಾಡದ ಕೃಷಿ ವಿವಿ ಸಭಾಭವನದಲ್ಲಿ ಶನಿವಾರ ನಡೆದ ಕೃಷಿ ಇಲಾಖೆ ಅಧಿಕಾರಿಗಳ ಸಮಾಲೋಚನೆ ಸಭೆಯಲ್ಲಿ ಕೃಷಿ ಬೆಲೆ ಆಯೋಗದ ಅಧ್ಯಕ್ಷ ಡಾ. ಪ್ರಕಾಶ ಕಮ್ಮರಡಿ ಕಿರುಹೊತ್ತಿಗೆ ಬಿಡುಗಡೆಗೊಳಿಸಿದರು.